

ಆದರವಿದ್ದರೂ ಅನುರಾಗ ಇರುವುದಿಲ್ಲ. ಇಂಥವೇ ಹಲವು ಮಾನದಂಡಗಳನ್ನು ಅನುಸರಿಸಿ ಪ್ರೀತಿಯ ಸ್ವರೂಪವನ್ನು ಅಳೆಯುವ ಪ್ರಯತ್ನಗಳಾಗಿವೆ. ಆದರೆ, ಅದೆಷ್ಟೋ ಮದುವೆಗಳಲ್ಲಿ, ಸಂಬಂಧಗಳಲ್ಲಿ ಈ ಮೂರೂ ಒಟ್ಟಿಗೆ ಇರುವುದಿಲ್ಲ. ಅವರು, ಹೇಗೋ ಹೊಂದಾಣಿಕೆಯಲ್ಲಿ ಬದುಕುತ್ತಿರುತ್ತಾರೆ. ದೀರ್ಘ ದಾಂಪತ್ಯಗಳಲ್ಲಿ ಕೊನೆಗೆ ಪರಸ್ಪರ ಆದರ ಮತ್ತು ಅವಲಂಬನೆ ಮಾತ್ರವೇ ಉಳಿಯಬಹುದು. ಇನ್ನೂ ಕೆಲವರು ಕ್ವಾಲೊಂಬನ ಎಲೆಕ್ಟ್ರಿಕಲ್ ಸಿದ್ಧಾಂತಗಳ ಮೊರೆಹೋಗಿ – ‘ವಿರುದ್ಧ ದೃಷ್ಟಿಕೋನದವರು ಪರಸ್ಪರ ಆಕರ್ಷಿತರಾಗುತ್ತಾರೆ’ ಎಂಬ ಹೇಳಿಕೆಯನ್ನು ಜನಪ್ರಿಯಗೊಳಿಸಿದರು. ಅಂದರೆ, ಉದ್ದಕ್ಕಿದ್ದವರಿಗೆ ಕುಳ್ಳಗಿರುವವರ ಮೇಲೆ, ಹೆಚ್ಚು ಮಾತಾಡದವರು ವಾಚಾಳಿಗಳನ್ನು ಕಂಡರೆ ಇಷ್ಟಪಡುತ್ತಾರೆ ಎಂಬ ಒಕ್ಕಣೆಯ ಈ ಉಕ್ತಿಯನ್ನು ಮನಶ್ಶಾಸ್ತ್ರ ಅಲ್ಲಗೆಳೆಯುತ್ತದೆ.

ಸಮಾನ ಆಸಕ್ತಿ ಇರುವವರು, ಒಂದೇ ರೀತಿಯ ಚಹರೆಯವರು, ಒಂದೇ ಬಗೆಯ ಮನಸ್ಸಿನವರು ಪರಸ್ಪರ ಆಕರ್ಷಿತರಾಗುತ್ತಾರೆ ಎನ್ನುತ್ತಾರೆ ಮನಶ್ಶಾಸ್ತ್ರಜ್ಞರು. ಆದರೆ, ಮೇಲಿನ ಉಕ್ತಿಯನ್ನು ಅನುಮೋದಿಸುವವರು, ಮನುಷ್ಯ ಪ್ರಭೇದದ ಜೈವಿಕ ಅಭಿವೃದ್ಧಿಗೆ ಎರಡು ಭಿನ್ನ ಸ್ವಭಾವಗಳನ್ನು ಮೈಗೂಡಿಸಿಕೊಂಡು ಹುಟ್ಟುವ ಮಕ್ಕಳು ಲಾಭಕರ ಎಂದು ನಂಬುವ ಜೀವವಿಜ್ಞಾನ ಶಾಸ್ತ್ರಜ್ಞರು. ಅದು ಅವರ ಆಶಯವೇ ಹೊರತು ಪರಸ್ಪರ ಆಕರ್ಷಿತರಾಗಿ ಪ್ರೀತಿಯಲ್ಲಿ ತೊಡಗಲು ಯಾವ ವೈರುಧ್ಯಗಳೂ ಕಾರಣವಲ್ಲ.

ಪ್ರೀತಿಯೆನ್ನುವುದು ಬರೀ ಭಾವನೆಯೊಂದೇ ಅಲ್ಲ. ಅದು ವಿಜ್ಞಾನವಷ್ಟೇ ಕೂಡ ಅಲ್ಲ. ಪ್ರೀತಿಯೆಂದರೆ ಅದು ಕ್ರಿಯೆಯೂ ಕೂಡ. ಅದಕ್ಕೆ ತಕ್ಕಂತೆ ಪರಿಣಾಮಗಳು ಕೂಡ ಆಗುತ್ತವೆ. ಈ ಕಾರಣ ಪ್ರೀತಿಯ ಕ್ರಿಯೆ ಅತ್ಯಂತ ಜವಾಬ್ದಾರಿಯುತವಾದ್ದು.

ನಮ್ಮ ದೇಹದ ರಾಸಾಯನಿಕಗಳು ಮತ್ತು ಭಾವನೆಗಳು ಕೊಡುವ ಎಲ್ಲ ಬಗೆಯ ಅನುಭೂತಿಗಳ ಸವಿಯನ್ನು ಹೀರುತ್ತಲೇ ನಾವು ಪ್ರೀತಿಯ ಜೊತೆಗೆ ಪ್ರೀತಿ ತರುವ ಜವಾಬ್ದಾರಿಗಳನ್ನೂ ರೂಢಿಸಿಕೊಳ್ಳಬೇಕು. ಅವುಗಳನ್ನು ಗೌರವಿಸಬೇಕು. ಪ್ರೀತಿಯ ಅನುಭೂತಿಗೆ ಬೀಳುವ ಎಳೆಯ ಮತ್ತು ಹಿರಿಯ ಜೀವಗಳು, ಆ ಒಂದು ರಸವತ್ತಾದ ಗಳಿಗೆಗಳನ್ನೇ ತಮ್ಮ ವಾಣಿಜ್ಯ ದಂಧೆಗೆ ಬಳಸಿಕೊಳ್ಳುವ ಜನರ ಬಗ್ಗೆ ಎಚ್ಚರಿಕೆಯಿರಬೇಕು. ಅದನ್ನು ಭಯ ಮತ್ತು ದ್ವೇಷದ ಕಡೆಗೆ ನಡೆಸುವ ಯಾವುದೇ ಧರ್ಮ ಅಥವಾ ಸರ್ಕಾರದ ನೀತಿಗಳ ಪೂರ್ವಾಪರ ವಿಚಾರಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸಬೇಕು.

ಪ್ರೀತಿಯ ನಿವೇದನೆಗಳು, ವೇದನೆಗಳು, ಪರವಶತೆ, ಮೋಹಕತೆ ಮತ್ತು ಬದ್ಧತೆಯ ಸುಖದ ಅನುಭವದ ಮೂಸೆಯಲ್ಲಿ ನಮ್ಮ ಬದುಕುಗಳು ಅರಳಲು ನಾವು ಪ್ರೀತಿಯನ್ನು ಬೆಂಬಲಿಸಬೇಕು. ಪ್ರೀತಿಯ ಬದುಕಲ್ಲಿ ಅರಳುವ ಬದುಕಿನ ಮುಂದಿನ ಕೊಂಬೆಗಳನ್ನು (ಘಟ್ಟಗಳನ್ನು), ಬೊಂಬೆಗಳನ್ನು (ಮಕ್ಕಳನ್ನು) ಅವಲಂಬಿಸಿ ಬದುಕನ್ನು, ಸಮಾಜವನ್ನು ರೂಪಿಸಿಕೊಳ್ಳಬೇಕು.

ಜಾತಿ, ಕುಲ, ನಂಬಿಕೆ, ಸಂಸ್ಕೃತಿ, ಲೈಂಗಿಕತೆ, ಧರ್ಮಗಳಲ್ಲಿನ ವ್ಯತ್ಯಾಸಗಳು ಅನಿವಾರ್ಯ ಅಡೆತಡೆಗಳನ್ನು ಒಡ್ಡಿದರೂ ಸಮಾಜದ ಅಂಗೀಕಾರವಿದ್ದಲ್ಲಿ ಪ್ರೀತಿಯಲ್ಲಿರುವ ಎರಡು ಜೀವಗಳು ಅದರ ಪೂರ್ಣ ಲಾಭವನ್ನು ಪಡೆದು ಸಮಾಜಕ್ಕೆ ಅದನ್ನು ಮತ್ತೆ ನೀಡಬಲ್ಲವು. ಏಕೆಂದರೆ ಪ್ರೀತಿಯೆನ್ನುವ ಅನುಭವ ಸರ್ವರಿಗೂ ಆಗುವಂಥದ್ದು. ಅದು ಮನುಷ್ಯನ ಮೂಲಭೂತ ರಚನೆ. ಇದೇ ಕಾರಣಕ್ಕೆ ಬೇರೆಯವರಿಗೆ ಆದ ಪ್ರೀತಿಯನ್ನು ಗೌರವಿಸುವ ಮತ್ತು ಆದರಿಸುವ ಗುಣ ಎಲ್ಲರಿಗೂ ಇರಬೇಕು.

ಒಬ್ಬರ ಪ್ರೀತಿಯನ್ನು ಕೆಡಿಸಿದರೆ, ಪ್ರೀತಿಯಲ್ಲಿರುವವರ ಮೇಲೆ ಅವರೊಲ್ಲದ ಬದ್ಧತೆಯನ್ನು ಹೇರಹೊರಟರೆ, ಅವರಿಗೆ ತೊಂದರೆ ನೀಡಿದರೆ ಅದರ ಪರಿಣಾಮ ಇಡೀ ಸಮಾಜದ ಮೇಲೆ ಆಗುತ್ತದೆ. ಏಕೆಂದರೆ ಹುಟ್ಟುವ ಮಕ್ಕಳು, ಮನೆ, ಸಂಸಾರ, ಸಂಬಂಧಗಳು ಎಲ್ಲವೂ ಪ್ರೀತಿಯ ಮುಂದಿನ ಘಟ್ಟಗಳು. ಪ್ರೀತಿಯೇ ಇಲ್ಲದೆಡೆ ಇವ್ಯಾವೂ ಸರಿಯಾಗಿ ನಿಭಾವಣೆಯಾಗುವುದಿಲ್ಲ. ಬದುಕು ಎನ್ನುವುದೇ ಬಲವಂತವಾಗಬಹುದು. ಅನುರಾಗ ಮತ್ತು ಅನ್ಯೋನ್ಯತೆ ಇಲ್ಲದ ಕಡೆ ಬದ್ಧತೆಯೂ ಉಳಿಯುವುದಿಲ್ಲ. ಇಂತಹ ಅನಾರೋಗ್ಯಕರ ವಿಚಾರಗಳ ಸರಪಳಿಯನ್ನು ತುಂಡರಿಸಲು ನಿಜವಾದ ಪ್ರೀತಿಗೆ ನೀರೆಯುವುದೇ ಉತ್ತಮ ಮಾರ್ಗ. ಅಂತೆಯೇ ಯಾರ ಮೇಲೂ ಪ್ರೀತಿಯಾಗದ ಜನರನ್ನು ಹೀಯಾಳಿಸುವುದು ಅಥವಾ ಪ್ರೀತಿಸಲ್ಪಡದ ವ್ಯಕ್ತಿಯೆಂದು ಜರೆಯುವುದು ಕೂಡ ಅನಗತ್ಯ. ಅವರಿಗೆ ಪ್ರೀತಿಯಾಗಿಲ್ಲವೆಂದಲ್ಲಿ ಅದು ಅವರ ಅಭಿರುಚಿ ಮತ್ತು ಇಷ್ಟಕ್ಕೆ ಬಿಟ್ಟ ವಿಷಯ. ಅದು ಆಗುವುದೇ ಇಲ್ಲ ಎಂದರ್ಥವಲ್ಲ.

ಪ್ರೀತಿಯಲ್ಲಿ ಏಕಮುಖವಾಗಿ ಬೀಳುವವರು ತಮ್ಮ ಆಯ್ಕೆಯನ್ನು ಸಾಧ್ಯವಾದಷ್ಟೂ ಬೇಗ ಪರಿಷ್ಕರಿಸಿಕೊಳ್ಳಬೇಕು. ಇಲ್ಲದಿದ್ದಲ್ಲಿ ಅಂತಹ ಸಂಬಂಧದಲ್ಲಿ ಯಾವ ರೇಖೆಗಳೂ ಹರಿದು ಪ್ರೀತಿಯ ತ್ರಿಕೋನಗಳನ್ನು ಸೃಷ್ಟಿಸಲಾರವು. ಆದರೆ ಏಕಮುಖವಾಗಿ ಪ್ರೀತಿ ಮಾಡಬಲ್ಲವರು ಕೂಡ ಪ್ರೀತಿಯ ಲವಲೇಶವೂ ಮನಸ್ಸಿನಲ್ಲಿರದ ಕೆಲವರಿಗಿಂತ ಹೆಚ್ಚು ಮನುಷ್ಯತ್ವವನ್ನು